# ರತ್ನಗಳೆಲ್ಲ ಹೂಗಳಾಗಿ ಹೂಗಳು ಗೋಪುರವಾಗಿ

■ ಬೃಂದಾ ಎನ್. ರಾವ್



ಅಮೆರಿಕ ಪ್ರವಾಸದಲ್ಲೊಮ್ಮೆ ಮನೆಯೊಂದರ ಮುಂದೆ ನಡೆದು ಹೋಗುವಾಗ, ಒಂದೆರಡು ಕ್ರಿಸ್‌ಮಸ್ ಮರಗಳ ಮೇಲೆ ದೀಪಾಲಂಕಾರ ಮಾಡಿದಂತೆ ಕಾಣಿಸಿತು. ಅನುಮಾನ ಬಂದು ಮತ್ತೆ ತಿರುಗಿ ನೋಡಿದೆ. ನನ್ನ ಕಣ್ಣನ್ನು ನಾನೇ ನಂಬಲಾಗಲಿಲ್ಲ. ಆ ಮನೆಗೆ–ಮರಕ್ಕೆ ಅಲಂಕಾರದಂತೆ ಕಾಣಿಸಿದ್ದು ವಿದ್ಯುದ್ದೀಪಗಳಲ್ಲ; ಹೂವಿನ ಗಿಡಗಳು! ಶಂಕು ಆಕಾರದ ಗಿಡಗಳ ಮೇಲೆ ಸುತ್ತಲೂ ಅಲಂಕರಿಸಿದಂತೆ ಅರಳಿದ ಗುಲಾಬಿಗಳಂತೆ ಕಾಣಿಸುತ್ತಿದ್ದ ಕೆಂಪು ಮಿಶ್ರಿತ ಹೂಗಳು! ತೆರೆದ ಬಾಯಿ ತೆರೆದು ನೋಡುತ್ತಾ ನಿಂತೆ. ಅಂತಹ ಹೂವುಗಳ ಚಿತ್ರವನ್ನೂ ಸಹ ಎಲ್ಲೂ ನೋಡಿರಲಿಲ್ಲ.

ಅದು ‘ಬೋರಾಗಿನೇಸಿ’ ಕುಟುಂಬಕ್ಕೆ ಸೇರಿದ ‘ಇಕಿಯಂ ವೈಲ್ಡ್ ಪ್ರಿಟಿ’ ಅಥವಾ ‘ಟವರ್ ಆಫ್ ಜ್ಯುವೆಲ್ಸ್’ (ರತ್ನ ಗೋಪುರ ಎನ್ನಬಹುದು) ಎಂಬ ಹೂವಿನ ಗಿಡ. ಅದಕ್ಕೆ ‘ಗುಲಾಬಿ ಕಾರಂಜಿ’ ಎಂದೂ ಕರೆಯುತ್ತಾರೆ.

‘ರತ್ನ ಗೋಪುರ’ ಹೂಗಿಡಗಳ ಮೂಲ ಸ್ಥಾನ ಸ್ಪೇನ್ ದೇಶದ ಕ್ಯಾನರಿ ದ್ವೀಪಗಳು. ಅಲ್ಲಿಯ ಜ್ವಾಲಾಮುಖಿ ‘ಮೌಂಟ್ ತೀದಿ’ಯ ಕಣಿವೆಗಳ ಉಪ ಆಲ್ಪೈನ್ ವಲಯದಲ್ಲಿ ಬೆಳೆಯುತ್ತವೆ. ಅವು ಸುಮಾರು ಎಂಟರಿಂದ ಹತ್ತು ಅಡಿಗಳಷ್ಟು ಎತ್ತರ ಬೆಳೆಯುವ ದ್ವೈವಾರ್ಷಿಕ ಮೂಲಿಕಾ ಸಸ್ಯಗಳು.

> ಹೂಗಳ ಗೋಪುರದಂತೆ ಕಾಣಿಸುವ ಆ ಹೂಮರಕ್ಕೆ ‘ರತ್ನಗೋಪುರ’ ಹಾಗೂ ‘ಗುಲಾಬಿ ಕಾರಂಜಿ’ ಎನ್ನುವ ಹೆಸರುಗಳೂ ಇವೆ. ಹೂಗಳನ್ನು ಮೈದುಂಬಿಕೊಂಡು ನಿಂತ ಈ ತರುಗಳು ಮನೆಯ ಸೌಂದರ್ಯಕ್ಕೆ ರತ್ನಗೋಪುರಗಳೇ ಸರಿ.

ಮೊದಲ ವರ್ಷದಲ್ಲಿ ಬೂದು ಹಾಗೂ ಹಸಿರು ಮಿಶ್ರಿತವಾದ, ಕಡಿದಾದ ಹಾಗೂ ಉದ್ದನೆಯ ಎಲೆಗಳಿಂದ ಕೂಡಿದ ಸುಮಾರು ಎರಡು ಅಡಿ ಉದ್ದದ ಪೊದೆ ಬೆಳೆಯುವುದು ಅಷ್ಟೇ. ಎರಡನೆಯ ವರ್ಷ ವಸಂತದ ಪ್ರಾರಂಭದಲ್ಲಿ ಗಿಡದ ಮಧ್ಯದಿಂದ ಆರು ಅಡಿಗಳಿಗೂ ಹೆಚ್ಚಿನ ಉದ್ದನೆಯ ಒಂದು ರೆಂಬೆ ಬೆಳೆದು ಅದರ ಸುತ್ತಲೂ ಸಣ್ಣ ಹೂಗಳು ಅರಳುತ್ತವೆ. ಹಾಗೆ ಹೂಗಳು ಅರಳಿ ನಿಲ್ಲುವ ಮರವನ್ನು ನೋಡುವುದೇ ಕಣ್ಣುಗಳಿಗೆ ಹಬ್ಬ.

‘ಗುಲಾಬಿ ಕಾರಂಜಿ’ ಹೂಗಳು ಹಮ್ಮಿಂಗ್ ಬರ್ಡ್, ದುಂಬಿ ಹಾಗೂ ಜೇನುಗಳನ್ನು ಆಕರ್ಷಿಸುತ್ತವೆ. ಹಾಗಾಗಿ ಜೇನುಸಾಕಣೆಗಾರರಿಗೆ ತುಂಬಾ ಪ್ರಿಯವಾದ ಗಿಡ ಅದು.

ಆಕರ್ಷಕ ರೂಪದಿಂದಾಗಿ ಈಗ ಅದನ್ನು ಎಲ್ಲ ಕಡೆ ಅಲಂಕಾರಿಕ ತೋಟಗಳಲ್ಲಿ ಬೆಳೆಸುತ್ತಾರೆ. ಆ ಗಿಡಕ್ಕೆ ಸೂರ್ಯನ ಬಿಸಿಲು ಹೇರಳವಾಗಿ ಬೇಕು. ಬರ ಹಾಗೂ ಶುಷ್ಕ ಪ್ರದೇಶಗಳಲ್ಲಿಯೂ ಅವನ್ನು ಬೆಳೆಸಬಹುದು. ಶೀತ ಪ್ರದೇಶಗಳಲ್ಲಾದರೆ ಹಸಿರು ಮನೆಯಲ್ಲಿ ಬೆಳೆಸಬಹುದು. ■